# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 926 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.08.2025 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು **ಖಾಸಗಿ ಕೈಗಾರಿಕಾ ಪ್ರದೇಶಗಳಲ್ಲಿ** ಕಾರ್ಯಚಟುವಟಿಕೆ ನಡೆಸುತ್ತಿವೆ; | ರಾಜ್ಯದಲ್ಲಿ ಖಾಸಗಿ ಕೈಗಾರಿಕಾ ಪ್ರದೇಶಗಳ ಮಾಹಿತಿ ಪಡೆಯುವ ವ್ಯವಸ್ಥೆ ಇರುವುದಿಲ್ಲ. ಆದಾಗ್ಯೂ ಹಲವಾರು ಖಾಸಗಿ ಕೈಗಾರಿಕಾ ಪ್ರದೇಶಗಳು ಸ್ಥಾಪನೆಯಾಗಿದ್ದು, ಅವುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಕಾರ್ಯಚಟುವಟಿಕೆ ನಡೆಸುತ್ತಿವೆ. ಕೆಲವು ಪ್ರಮುಖ ಖಾಸಗಿ ಕೈಗಾರಿಕೆ ಪ್ರದೇಶಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.<br><br>ಆದರೆ, ರಾಜ್ಯದಲ್ಲಿ ಜುಲೈ 2020 ರಿಂದ ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಎಂ.ಎಸ್.ಎಂ.ಇ. ಉದ್ಯಮಗಳ ನೋಂದಣಿ ಮಾಡಲಾಗುತ್ತಿದ್ದು, ದಿನಾಂಕ: 14.08.2025 ರಿಂದ ಈವರೆಗೆ ರಾಜ್ಯದಲ್ಲಿ ನೋಂದಣಿಯಾಗಿರುವ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಆ) | ರಾಜ್ಯದಲ್ಲಿ ಶೇ.6 ರಷ್ಟು ಕೈಗಾರಿಕೆಗಳು ಸರ್ಕಾರಿ ಸ್ವಾಮ್ಯದ ಕೆ.ಎಸ್.ಎಸ್.ಐ.ಡಿ.ಸಿ. ಮತ್ತು ಕೆ.ಐ.ಎ.ಡಿ.ಬಿ. ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಹಿತಿ ನಿಜವೇ; | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯದ ವಿವಿಧ ಸ್ಥಳಗಳಲ್ಲಿ 193 ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿ, ವಿವಿಧ ಮಾದರಿಯ 6439 ಕೈಗಾರಿಕಾ ಮಳಿಗೆಗಳನ್ನು ಮತ್ತು 9120 ವಿವಿಧ ಮಾದರಿಯ ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಿ/ ಅಭಿವೃದ್ಧಿಪಡಿಸಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಿರುತ್ತದೆ.<br><br>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಸಂಸ್ಥೆಯು ರಾಜ್ಯಾದಾದ್ಯಂತ ಒಟ್ಟು 215 ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿದ್ದು, ಅದರಲ್ಲಿ ಅಂದಾಜು 24,500 ಕೈಗಾರಿಕೆಗಳಿರುತ್ತದೆ. |
| ಇ) | ಕಳೆದ 2-3 ವರ್ಷಗಳಿಂದ ಕೆ.ಐ.ಎ.ಡಿ.ಬಿ. ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನಂತರ ಹಂಚಿಕೆ ದರದಲ್ಲಿ ಕೆ.ಎಸ್.ಎಸ್.ಐ.ಡಿ.ಸಿ.ಗೆ ಭೂಮಿಯನ್ನು ವರ್ಗಾಯಿಸದೇ | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಜಮೀನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ ಇರುವುದಿಲ್ಲ. ಆದ್ದರಿಂದ, ನಿಗಮಕ್ಕೆ ಅಗತ್ಯವಿರುವ ಜಮೀನನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕಂದಾಯ ಇಲಾಖೆಯಿಂದ ಪಡೆಯಲಾಗುತ್ತಿದೆ. |

| | | |
|---|---|---|
| | ಇರುವುದರಿಂದ ಸಾಕಷ್ಟು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಂಕಷ್ಟದಲ್ಲಿರುವುದು ನಿಜವೇ; | ಸರ್ಕಾರದ ಆದೇಶ ಸಂಖ್ಯೆ: ಸಿಐ 132 ಎಸ್.ಪಿ.ಕ್ಯೂ (ಇ) 2021, ದಿನಾಂಕ: 01.01.2022 ರನ್ವಯ, ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆ / ರಾಜ್ಯ ಸರ್ಕಾರದ / ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು / ಪಿ.ಎಸ್.ಯು / ಕೇಂದ್ರ – ರಾಜ್ಯ ಸರ್ಕಾರದ ಜಂಟಿ ಉದ್ಯಮ ಸಂಸ್ಥೆಗಳಿಗೆ ಕೆಐಎಡಿಬಿ ಯಿಂದ ಹಂಚಿಕೆ ಮಾಡುವ ಜಮೀನಿಗೆ 02 ವರ್ಷ ಗುತ್ತಿಗೆ ಮತ್ತು ಮಾರಾಟ ಆಧಾರದ ಮೇಲೆ ಜಮೀನು ಹಂಚಿಕೆ ಮಾಡಲಾಗುತ್ತದೆ.<br><br>ನಿಗಮದ ಬೇಡಿಕೆಯಂತೆ, ಕೆ.ಐ.ಎ.ಡಿ.ಬಿ ಮಂಡಳಿಯು ಸ್ವಾಧೀನಪಡಿಸಿಕೊಂಡ ಭೂಮಿಯ ದರಕ್ಕೆ ಮಂಡಳಿಯ ಸೇವಾ ಶುಲ್ಕ ಮಾತ್ರ ಸೇರಿಸಿ, ಅಭಿವೃದ್ಧಿಪಡಿಸದೇ ಇರುವ ಜಮೀನನ್ನು ನಿಗಮಕ್ಕೆ ಹಂಚಿಕೆ ಮಾಡಲು ಕೋರಿಕೆ ಸಲ್ಲಿಸಲಾಗುತ್ತಿದೆ. |
| ಈ) | ಇದ್ದಲ್ಲಿ, ಸರ್ಕಾರವು ಈ ಕುರಿತು ಯಾವ ಕ್ರಮಗಳನ್ನು ಕೈಗೊಂಡಿದೆ (ಮಾಹಿತಿ ನೀಡುವುದು) | ಕೆ.ಐ.ಎ.ಡಿ.ಬಿ ಯು ರಾಜ್ಯಾದ್ಯಂತ ವಿವಿಧ ಪ್ರದೇಶಗಳಲ್ಲಿ ಜಮೀನು ಸ್ವಾಧೀನಪಡಿಸಿಕೊಂಡು ಕೈಗಾರಿಕಾ ಪ್ರದೇಶ ಸ್ಥಾಪಿಸುತ್ತಿದೆ.<br><br>ಕೆ.ಐ.ಎ.ಡಿ.ಬಿ ಯು ಜಮೀನನ್ನು ಸ್ವಾಧೀನಪಡಿಸಿಕೊಂಡ ದರಕ್ಕೆ ಸೇವಾ ಶುಲ್ಕ ಮಾತ್ರ ವಿಧಿಸಿ ಹಂಚಿಕೆ ಮಾಡಲು ನಿಗಮವು ಮೊದಲಿನಿಂದಲೂ ಪ್ರಸ್ತಾವನೆ ಸಲ್ಲಿಸುತ್ತಾ ಬಂದಿದೆ.<br><br>ಇತ್ತೀಚಿಗೆ ದಿನಾಂಕ 15.07.2024 ರಂದು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಸ್ವಾಧೀನಪಡಿಸಿಕೊಂಡ 05 ಕೈಗಾರಿಕಾ ಪ್ರದೇಶಗಳಲ್ಲಿನ ಜಮೀನುಗಳನ್ನು ಭೂಸ್ವಾಧೀನದ ದರಕ್ಕೆ ಮಂಡಳಿ ಸೇವಾ ಶುಲ್ಕ ಮಾತ್ರ ಸೇರಿಸಿ ಹಂಚಿಕೆ ಮಾಡಲು ನಿಗಮವು ಪ್ರಸ್ತಾವನೆ ಸಲ್ಲಿಸಿರುತ್ತದೆ.<br><br>ನಿಗಮದ ಕೋರಿಕೆ ಮೇರೆಗೆ ದಿನಾಂಕ 26.11.2024 ರಂದು ನಡೆದ ಕೆ.ಐ.ಎ.ಡಿ.ಬಿ ಮಂಡಳಿಯ 391ನೇ ಮಂಡಳಿಯ ಸಭೆಯಂತೆ ನಿಗಮಕ್ಕೆ ಕೆಳಕಂಡ ಪ್ರದೇಶಗಳಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ಜಮೀನು ಹಂಚಿಕೆ ಮಾಡುವ ವಿಷಯದಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ. |

| | | |
|---|---|---|
| 1 | ಅದಿನಾರಾಯಣ ಹೊಸಹಳ್ಳಿ, ಬೆಂಗಳೂರು ಗ್ರಾಮಾಂತರ | 50-00 ಎಕರೆ |
| 2 | ಭಾವನಹಳ್ಳಿ, ವೇಮಗಲ್ | 25-00 ಎಕರೆ |
| 3 | ಹಾರೋಹಳ್ಳಿ, ಬೆಂಗಳೂರು | 25-00 ಎಕರೆ |
| 4 | ನಂದೂರುಕೇಸರಟಗಿ, ಕಲಬುರಗಿ | 100-00 ಎಕರೆ |
| 5 | ಮೇಟಿಕುರ್ಕಿ, ಹಿರಿಯೂರು, ಚಿತ್ರದುರ್ಗ ಜಿಲ್ಲೆ | 100-00 ಎಕರೆ |

| | | |
|---|---|---|
| | | ಪ್ರಸ್ತಾಪಿಸಿರುವ ಜಮೀನನ್ನು ಕೈಗಾರಿಕಾ ವಸಾಹತು ಸ್ಥಾಪಿಸಲು ಜಮೀನು ಭೂಸ್ವಾಧೀನದ ವೆಚ್ಚಕ್ಕೆ ಸೇವಾ ಶುಲ್ಕವನ್ನು ಮಾತ್ರ ಸೇರಿಸಿ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಅನುಮೋದನೆ ನೀಡಿರುತ್ತದೆ.<br><br>ನಿಗಮವು ದಿನಾಂಕ 10.01.2025, 13.03.2025 ಪುನ: ಪ್ರಸ್ತಾವನೆ ಸಲ್ಲಿಸಿ, ಪ್ರಸ್ತಾಪಿತ ಜಮೀನುಗಳನ್ನು ಭೂಸ್ವಾಧೀನದ ವೆಚ್ಚಕ್ಕೆ ಸೇವಾ ಶುಲ್ಕವನ್ನು ಮಾತ್ರ ಸೇರಿಸಿ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಕೋರಲಾಗಿರುತ್ತದೆ.<br><br>ಈ ಪೈಕಿ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಮೇಟಿಕುರ್ಕಿ ಪ್ರದೇಶದಲ್ಲಿ 100-00 ಎಕರೆ ಜಮೀನನ್ನು ಪ್ರೋರೇಟಾ ದರದಂತೆ ಅಭಿವೃದ್ಧಿ ವೆಚ್ಚ ಸೇರಿಸಿ, ಎಕರೆ ಒಂದಕ್ಕೆ ರೂ. 67.00 ಲಕ್ಷದಂತೆ ದರ ವಿಧಿಸಿ, ಕೆ.ಐ.ಎ.ಡಿ.ಬಿ.ಯು ಹಂಚಿಕೆ ಮಾಡಿರುತ್ತದೆ. |

ಸಿಐ 233 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ
ಉದ್ಯಮಗಳ ಸಚಿವರು.

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 926ಕ್ಕೆ ಅನುಬಂಧ-1

| ಕ್ರ. ಸಂ. | ಜಿಲ್ಲೆಗಳು | ಖಾಸಗಿ ಕೈಗಾರಿಕಾ ಪ್ರದೇಶದ ಹೆಸರು ಮತ್ತು ಸಂಖ್ಯೆ | ಖಾಸಗಿ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ | | |
|---|---|---|---|---|---|
| | | | ಸೂಕ್ಷ್ಮ | ಸಣ್ಣ | ಮಧ್ಯಮ |
| 1 | ಬೆಳಗಾವಿ | ಬೆಳಗಾವಿ ಮ್ಯಾನುಫ್ಯಾಕ್ಚರರ್ಸ್ ಕೋ ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿಮಿಟೆಡ್ (ಬೆಮ್‌ಸಿಲ್) | 270 | 28 | 2 |
| 2 | ಧಾರವಾಡ | ಬನಸಾಲಿ ಕೈಗಾರಿಕಾ ಪ್ರದೇಶ, ತಾರಿಹಾಳ, ಹುಬ್ಬಳ್ಳಿ | 2 ಘಟಕಗಳಿಗೆ ಯೋಜನೆ ಅನುಮೋದನೆ ನೀಡಿದ್ದು, ಅನುಷ್ಠಾನ ಹಂತದಲ್ಲಿರುತ್ತವೆ. | - | - |
| 3 | ಮಂಡ್ಯ | 1. ಫೇವರಿಚ್ ಮೆಗಾ ಫುಡ್ ಪಾರ್ಕ್, ಬನ್ನೇನಹಳ್ಳಿ, ಕೆ.ಆರ್. ಪೇಟೆ | 10 | - | - |
| | | 2. ಫೇವರಿಚ್ ಇಂಡಸ್ಟ್ರೀಯಲ್ ಪಾರ್ಕ್, ಕಾಳಿಂಗಹಳ್ಳಿ, ನಾಗಮಂಗಲ ತಾಲ್ಲೂಕು | ಯಾವುದೇ ಘಟಕಗಳಿಗೆ ಇದುವರೆಗೆ ನಿವೇಶನ ಹಂಚಿಕೆಯಾಗಿರುವುದಿಲ್ಲ. | | |
| 4 | ಉಡುಪಿ | ಉಡುಪಿ ಫುಡ್ ಪಾರ್ಕ್, ಮುಡಾರು ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ. | ನಿವೇಶನ ಹಂಚಿಕೆ ಹಾಗೂ ವಿದ್ಯುತ್ ಮಂಜೂರಾಗಿ ಪ್ರಗತಿಯಲ್ಲಿದೆ. | | |
| 5 | ಬೆಂಗಳೂರು | 1. ಕುಂಬಳಗೂಡು ಕೈಗಾರಿಕಾ ವಸಾಹತು<br>2. ಮಾಚೋಹಳ್ಳಿ ಕೈಗಾರಿಕಾ ವಸಾಹತು, ಮಾಗಡಿ ರಸ್ತೆ,<br>3. ಪ್ರಕಾಶ್ ನಗರ ಕೈಗಾರಿಕಾ ವಸಾಹತು<br>4. ನಾಯಂಡಹಳ್ಳಿ ಕೈಗಾರಿಕಾ ವಸಾಹತು<br>5. ಗುಬ್ಬಣ್ಣ ಕೈಗಾರಿಕಾ ವಸಾಹತು, ಪೀಣ್ಯ<br>6. ಪಟೇಲ್ ಚನ್ನಪ್ಪ ಕೈಗಾರಿಕಾ ವಸಾಹತು, ಪೀಣ್ಯ<br>7. ದೊಡ್ಡಣ್ಣ ಕೈಗಾರಿಕಾ ವಸಾಹತು, ಪೀಣ್ಯ<br>8. ಕರೀಂ ಸಾಬ್ ಕೈಗಾರಿಕಾ ವಸಾಹತು, ಪೀಣ್ಯ<br>9. ಕರಿಹೋಬನಹಳ್ಳಿ ಕೈಗಾರಿಕಾ ವಸಾಹತು, ಪೀಣ್ಯ<br>10. ನೆಟ್ಟೇರಪ್ಪ ಕೈಗಾರಿಕಾ ವಸಾಹತು, ಪೀಣ್ಯ<br>11. ಭೈರವೇಶ್ವರ ಕೈಗಾರಿಕಾ ವಸಾಹತು, ಪೀಣ್ಯ<br>12. ಮಾರುತಿ ಕೈಗಾರಿಕಾ ವಸಾಹತು, ಪೀಣ್ಯ<br>13. ರಾಘವೇಂದ್ರ ಕೈಗಾರಿಕಾ ವಸಾಹತು, ಪೀಣ್ಯ<br>14. ಕಿಯೋನಿಕ್ಸ್ ಕೈಗಾರಿಕಾ ವಸಾಹತು, ಪೀಣ್ಯ<br>15. ಕೆಂಪಯ್ಯ ಗಾರ್ಡನ್ ಕೈಗಾರಿಕಾ ವಸಾಹತು<br>16. ಅಬ್ಬಿಗೆರೆ ಕೈಗಾರಿಕಾ ವಸಾಹತು<br>17. ಪೇಟೆ ಚನ್ನಪ್ಪ ಕೈಗಾರಿಕಾ ವಸಾಹತು, ಕಾಮಾಕ್ಷಿಪಾಳ್ಯ<br>18. ಭದ್ರಪ್ಪ ಕೈಗಾರಿಕಾ ವಸಾಹತು, ಕಾಮಾಕ್ಷಿಪಾಳ್ಯ<br>19. ಕುಳ್ಳೇಗೌಡ ಕೈಗಾರಿಕಾ ವಸಾಹತು, ಕಾಮಾಕ್ಷಿಪಾಳ್ಯ | | | |

ಚುಕ್ಕೆ ಗುರುತಿಲ್ಲದ ಪ್ರ.ಸಂ: 926 ಕ್ಕೆ ಅನುಬಂಧ - 2

LAQ 779 (926)

**MSME Registered in Government Of INDIA UDYAM Portal From July 2020**

**As on 14.08.2025**

| Sl No. | District Name | Udyam Regd. | Micro | Small | Medium |
|---|---|---|---|---|---|
| 1 | BAGALKOT | 52673 | 52314 | 346 | 13 |
| 2 | BALLARI | 51842 | 50879 | 902 | 61 |
| 3 | BELAGAVI | 154833 | 153644 | 1125 | 64 |
| 4 | BENGALURU (RURAL) | 104932 | 103294 | 1496 | 142 |
| 5 | BENGALURU (URBAN) | 570896 | 555827 | 13761 | 1308 |
| 6 | BIDAR | 40873 | 40530 | 324 | 19 |
| 7 | CHAMARAJNAGAR | 23751 | 23587 | 160 | 4 |
| 8 | CHIKBALLAPUR | 38612 | 38290 | 310 | 12 |
| 9 | CHIKKAMAGALURU | 34537 | 34152 | 369 | 16 |
| 10 | CHITRADURGA | 41556 | 41186 | 348 | 22 |
| 11 | DAKSHIN KANNAD | 86733 | 85455 | 1198 | 80 |
| 12 | DAVANGERE | 56991 | 56411 | 557 | 23 |
| 13 | DHARWAD | 83014 | 82019 | 930 | 65 |
| 14 | GADAG | 29959 | 29743 | 214 | 2 |
| 15 | HASSAN | 57796 | 57114 | 655 | 27 |
| 16 | HAVERI | 46074 | 45665 | 391 | 18 |
| 17 | KALABURAGI | 52560 | 51909 | 622 | 29 |
| 18 | KODAGU | 18199 | 17941 | 236 | 22 |
| 19 | KOLAR | 45599 | 45082 | 486 | 31 |
| 20 | KOPPAL | 30997 | 30521 | 466 | 10 |
| 21 | MANDYA | 51273 | 50849 | 417 | 7 |
| 22 | MYSURU | 122523 | 121197 | 1264 | 62 |
| 23 | RAICHUR | 40085 | 39347 | 702 | 36 |
| 24 | RAMANAGARA | 39629 | 39273 | 334 | 22 |
| 25 | SHIVAMOGGA | 61883 | 61257 | 600 | 26 |
| 26 | TUMAKURU | 85033 | 84150 | 853 | 30 |
| 27 | UDUPI | 51614 | 50965 | 603 | 46 |
| 28 | UTTAR KANNAD | 48799 | 48495 | 301 | 3 |
| 29 | VIJAYANAGAR | 19801 | 19669 | 130 | 2 |
| 30 | VIJAYAPURA | 55787 | 55189 | 560 | 38 |
| 31 | YADGIR | 23124 | 22891 | 222 | 11 |
| | Total : | 22,21,978 | 21,88,845 | 30,882 | 2,251 |

ಪಿಪಿ 233 ಪಿಎಸ್‌ಪಿ 2025.